## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1781

ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 19-03-2021.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮ ಪಂಚಾಯಿತಿಗಳಲ್ಲಿ ಆಸ್ತಿ ತೆರಿಗೆ ಸಂಗ್ರಹ ತೀವ್ರವಾಗಿ ಕುಸಿದಿದ್ದು, ಗ್ರಾಮ ಪಂಚಾಯಿತಿಗಳ ಅಗತ್ಯ ವೆಚ್ಚಗಳ ನಿರ್ವಹಣೆಗೂ ಆದಾಯವಿಲ್ಲದೆ ಸಂಕಷ್ಟ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿಲ್ಲ. |
| (ಆ) | ಬಂದಿದ್ದಲ್ಲಿ, ಗ್ರಾಮ ಪಂಚಾಯಿತಿಗಳ ಅಗತ್ಯ ವೆಚ್ಚಗಳ ನಿರ್ವಹಣೆಗೆ ಆದಾಯ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ಒದಗಿಸುವುದು) | ಆದಾಗ್ಯೂ, ಗ್ರಾಮ ಪಂಚಾಯತಿಯಲ್ಲಿ ಅಗತ್ಯ ವೆಚ್ಚಗಳ ನಿರ್ವಹಣೆಗೆ ಆದಾಯಕ್ಕಾಗಿ ನೈರ್ಮಲ್ಯೀಕರಣ, ಸಿಬ್ಬಂದಿ ವೇತನ, ಕುಡಿಯುವ ನೀರು, ರಸ್ತೆ, ವಿದ್ಯುಚ್ಛಕ್ತಿ ಬಿಲ್ ಮುಂತಾದ ವೆಚ್ಚಗಳಿಗೆ ಸರ್ಕಾರದಿಂದ ಶಾಸನಬದ್ಧ ಅನುದಾನ, 15ನೇ ಹಣಕಾಸು ಆಯೋಗದ ಅನುದಾನ, ಕುಡಿಯುವ ನೀರಿನ ನಿರ್ವಹಣೆಗೆ ಮತ್ತು ಗ್ರಾಮ ಪಂಚಾಯತಿ ಸದಸ್ಯರ ಗೌರವಧನಕ್ಕಾಗಿ ಪ್ರತ್ಯೇಕವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. |
| (ಇ) | ಬೆಳಗಾವಿ ಜಿಲ್ಲೆಯಲ್ಲಿರುವ ಒಟ್ಟು ಗ್ರಾಮ ಪಂಚಾಯಿತಿಗಳೆಷ್ಟು; ಪ್ರತಿ ಗ್ರಾಮ ಪಂಚಾಯಿತಿಗೂ ಪ್ರತಿ ತಿಂಗಳು ಬೇಕಾಗುವ ಅಗತ್ಯ ನಿರ್ವಹಣೆಯ ವೆಚ್ಚವೆಷ್ಟು; (ವಿವರ ಒದಗಿಸುವುದು) | ಪ್ರಸ್ತುತ ಬೆಳಗಾವಿ ಜಿಲ್ಲೆಯಲ್ಲಿ 506 ಗ್ರಾಮ ಪಂಚಾಯತಿಗಳಿದ್ದು, ಪ್ರತಿ ಗ್ರಾಮ ಪಂಚಾಯತಿಗೆ ಪ್ರತಿ ತಿಂಗಳಿಗೆ ಅಗತ್ಯ ನಿರ್ವಹಣೆಗಾಗಿ ಸರಾಸರಿ ರೂ. 1.50 ಲಕ್ಷಗಳು ವೆಚ್ಚವಾಗಲಿದೆ. |

(ಈ) ಬೆಳಗಾವಿ ಜಿಲ್ಲೆಯ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕರ ಸಂಗ್ರಹಣೆಯ ಗರಿಷ್ಠ ಪ್ರಮಾಣ ಎಷ್ಟು; ಈವರೆಗೆ ಎಷ್ಟು ತೆರಿಗೆ ಸಂಗ್ರಹಿಸಲಾಗಿದೆ; ಎಷ್ಟು ತೆರಿಗೆ ಬಾಕಿ ಉಳಿದಿದೆ; (ಕಳೆದ ಮೂರು ವರ್ಷಗಳ ವಿವರ ಒದಗಿಸುವುದು)

ಬೆಳಗಾವಿ ಜಿಲ್ಲೆಯ ಗ್ರಾಮ ಪಂಚಾಯತಿ ಮಟ್ಟದಲ್ಲಿ 2017-18 ರಲ್ಲಿ ಗರಿಷ್ಠ ರೂ. 38.62 ಲಕ್ಷಗಳು, 2018-19 ರಲ್ಲಿ ಗರಿಷ್ಠ ರೂ.44.57 ಲಕ್ಷಗಳು, ಮತ್ತು 2019-20 ರಲ್ಲಿ ಗರಿಷ್ಠ ರೂ.41.56 ಲಕ್ಷಗಳು ವಸೂಲಾತಿಯಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಇದುವರೆವಿಗೂ ರೂ.3078.86 ಲಕ್ಷ ತೆರಿಗೆ ಸಂಗ್ರಹಣೆಯಾಗಿದ್ದು ರೂ.16123.01 ಲಕ್ಷ ಬಾಕಿ ಇರುತ್ತದೆ.

ಕಳೆದ ಮೂರು ವರ್ಷಗಳಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕರ ಸಂಗ್ರಹಣೆ ಮತ್ತು ಬಾಕಿ ವಿವರಗಳು ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

| ವರ್ಷ | ಆರಂಭಿಕ ಶಿಲ್ಕು | ಚಾಲ್ತಿ ವರ್ಷದ ಬೇಡಿಕೆ | ಒಟ್ಟು ಬೇಡಿಕೆ | ವಸೂಲಾತಿ | ಬಾಕಿ |
|---|---|---|---|---|---|
| **2017-18** | **14918.02** | **3400.99** | **18319.01** | **1651.92** | **16667.09** |
| **2018-19** | **15470.45** | **3486.03** | **18956.47** | **2297.04** | **16659.43** |
| **2019-20** | **15202.97** | **3710.96** | **18913.93** | **3422.98** | **15490.95** |
| **2020-21 (18.03.2021)** | **15437.45** | **3764.42** | **19201.87** | **3078.86** | **16123.01** |

(ಉ) ಗ್ರಾಮ ಪಂಚಾಯಿತಿಗಳಿಗೆ ತೆರಿಗೆ ಹೊರತುಪಡಿಸಿ ಬೇರೆ ಮೂಲಗಳಿಂದ ಸ್ವಯಂ ಆದಾಯ ಸೃಜಿಸುವ ಹೊಸ ಯೋಜನೆಗಳು ಸರ್ಕಾರದ ಮುಂದಿದೆಯೇ; ಅವುಗಳ ರೂಪ ರೇಷೆಗಳೇನು? (ವಿವರ ನೀಡುವುದು)

ಗ್ರಾಮ ಪಂಚಾಯಿತಿಗಳಿಗೆ ತೆರಿಗೆ ಹೊರತುಪಡಿಸಿ ಬೇರೆ ಮೂಲಗಳಿಂದ ಸ್ವಯಂ ಆದಾಯ ಸೃಜಿಸುವ ಹೊಸ ಯೋಜನೆಗಳು ಸರ್ಕಾರದ ಮುಂದಿರುವುದಿಲ್ಲ.

ಆದಾಗ್ಯೂ, ಗ್ರಾಮ ಪಂಚಾಯಿತಿಗಳು ತೆರಿಗೆ ಹೊರತುಪಡಿಸಿ ಬೇರೆ ಮೂಲಗಳಿಂದ ಈ ಕೆಳಕಂಡಂತೆ ಸ್ವಯಂ ಆದಾಯ ಸೃಜಿಸಿಕೊಳ್ಳಬಹುದಾಗಿದೆ.

1) ಗ್ರಾಮ ಪಂಚಾಯತಿಯ ಮಾಲೀಕತ್ವದ ಅಥವಾ ಅದರಲ್ಲಿ ನಿಹಿತವಾದ ಯಾವುದೇ ಸ್ಥಿರ ಅಥವಾ ಚರ ಸ್ವತ್ತಿನ ಬಾಡಿಗೆ ಅಥವಾ ಅದರಿಂದ ಬರುವ ಇತರೆ ಆದಾಯ ಅಥವಾ ಮಾರಾಟದಿಂದ ಬರುವ ಉತ್ಪತ್ತಿ.
2) ಸರ್ಕಾರದಿಂದ ಅಥವಾ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯಿಂದ ಸಾಲಗಳು ಅಥವಾ ಕೊಡುಗೆಗಳ ರೂಪದಲ್ಲಿ ಅಥವಾ ಕಾಣಿಕೆಯ ರೂಪದಲ್ಲಿ ಗ್ರಾಮ ಪಂಚಾಯತಿಯಿಂದ ಸ್ವೀಕರಿಸಲಾದ ಮೊತ್ತಗಳು.
3) ಗ್ರಾಮ ಪಂಚಾಯತಿಯಿಂದ ವಿಧಿಸಿದ ಯಾವುದೇ ದರ ಮತ್ತು ಫೀಜಿನಿಂದ ಬಂದ ಉತ್ಪತ್ತಿಗಳು.
4) ಯಾವುದಾದರೂ ಮೂಲದಿಂದ ಬರುವ ಇತರೆ ಎಲ್ಲಾ ಮೊತ್ತಗಳು.

ಸಂ. ಗ್ರಾಅಪ 140 ಗ್ರಾಪಂಅ 2021

**(ಕೆ.ಎಸ್. ಈಶ್ವರಪ್ಪ)**
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು